# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 478 |
| ಸದಸ್ಯರ ಹೆಸರು | : | ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.12.2025 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿ |

| | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರಿ ಬಹುಮಹಡಿ ಕಟ್ಟಡಗಳಲ್ಲಿನ ಲಿಫ್ಟ್‌ಗಳಲ್ಲಿ ನಿರ್ವಾಹಕ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಇರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳೇನು: (ಮಾಹಿತಿ ನೀಡುವುದು) | ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ವಿಧಾನವನ್ನು ಆಯಾಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಲಾಗಿರುತ್ತದೆ.<br><br>ಲಿಫ್ಟ್ ಆಪರೇಟರ್ ಹುದ್ದೆಯು ಗ್ರೂಪ್ -ಡಿ ಹುದ್ದೆಯಾಗಿದ್ದು, ಪ್ರಸ್ತುತದಲ್ಲಿ ಈ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳುವುದು ಸರ್ಕಾರದ ಇತ್ತೀಚಿನ ಅಂಗೀಕೃತ ಕಾರ್ಯನೀತಿಯಾಗಿರುತ್ತದೆ. |
| (ಆ) | ಸರ್ಕಾರಿ ಮತ್ತು ಖಾಸಗಿ ಕಟ್ಟಡಗಳಲ್ಲಿಯ ಲಿಫ್ಟ್‌ಗಳಲ್ಲಿ ಲಿಫ್ಟ್ ನಿರ್ವಾಹಕ ಹುದ್ದೆಗಳನ್ನು ಕಡ್ಡಾಯವಾಗಿ ಅಂಗವಿಕಲರಿಗೆ ಮೀಸಲಿರಿಸುವ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು: | The Rights of Persons with Disabilities Act, 2016 (Central Act No. 49 of 2016) ರ ಸೆಕ್ಷನ್ 34ರಲ್ಲಿ ಮೀಸಲಾತಿ ಕುರಿತು ಉಪಬಂಧಗಳಿರುತ್ತವೆ. |
| (ಇ) | ಖಾಸಗಿ ಬಹುಮಹಡಿ ಕಟ್ಟಡಗಳಲ್ಲಿಯೂ ಕೂಡ ಲಿಫ್ಟ್ ನಿರ್ವಾಹಕ ಹುದ್ದೆಗಳನ್ನು ಅಂಗವಿಕಲರಿಗೆ ಮೀಸಲಿಡಲು ಸೂಕ್ತ ಕಾನೂನು ತರುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? | ಸೆಕ್ಷನ್2(k)ರಲ್ಲಿ "Government Establishment" ಎಂಬುವುದನ್ನು ಈ ಕೆಳಕಂಡಂತೆ ಪರಿಭಾಷಿಸಲಾಗಿದೆ:<br><br>"(k)" 'Government establishment' means a corporation established by or under a Central Act or State Act or an authority or a body owned or controlled or aided by the Government or a local authority or a Government company as defined in section 2 of the Companies Act, 2013 (18 of 2013) and includes a Department of the Government"<br>ಮೇಲ್ಕಂಡ ಪರಿಭಾಷೆಯನ್ವಯ ಅಂಗವೈಕಲ್ಯವನ್ನುಳ್ಳ ವ್ಯಕ್ತಿಗಳಿಗೆ ಕಲ್ಪಿಸಿರುವ ಮೀಸಲಾತಿಯು "Government establishment"ಗಳಿಗೆ ಮಾತ್ರ ಅನ್ವಯವಾಗುತ್ತದೆ.<br><br>ಸರ್ಕಾರಿ ಸಂಸ್ಥೆಗಳಲ್ಲಿ ವಿಕಲಚೇತನರಿಗೆ ಮೀಸಲಿಡಬಹುದಾದ ಹುದ್ದೆಗಳನ್ನು |

| | | |
|---|---|---|
| | | ಗುರುತಿಸಲು The Rights of Persons with Disabilities Act, 2016 (Central Act No. 49 of 2016) ಕಲಂ 33ರನ್ವಯ ತಜ್ಞರ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯು ಲಿಫ್ಟ್ ಆಪರೇಟರ್ ಹುದ್ದೆಯನ್ನು ಗುರುತಿಸಿರುತ್ತದೆ.<br><br>ಆದರೆ, ಲಿಫ್ಟ್ ಆಪರೇಟರ್ ಹುದ್ದೆಯನ್ನು ಕಡ್ಡಾಯವಾಗಿ ವಿಕಲಚೇತನರಿಂದಲೇ ಭರ್ತಿ ಮಾಡಬೇಕು ಎಂದು ಆದೇಶಿಸುವ ಅಥವಾ ಅಧಿಸೂಚಿಸುವ ಯಾವುದೇ ಆದೇಶ/ಅಧಿಸೂಚನೆಗಳನ್ನು ಹೊರಡಿಸಿಲ್ಲ, ಹಾಗೂ ಅಂತಹ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಸಿಆಸುಇ 250 ಸೇನಿಡಿ 2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ